सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
Aug Vol. : 10 Issue : 3 5124/ಶುಭಕೃತ್ ಸಂವತ್ಸರ ಆಗೋಸ್ಟ್ 2023 ಪುಟ 8 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

## ಶ್ರೀರಾಮ ವಿದ್ಯಾಕೇಂದ್ರದ ವಿವಿಧ ವಿಭಾಗಗಳಲ್ಲಿ ನೂತನ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿಗಳನ್ನು ಸ್ವಾಗತಿಸುವ ಆಗತ ಸ್ವಾಗತ ಕಾರ್ಯಕ್ರಮ













## ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗದಲ್ಲಿ 1ನೇ ತರಗತಿಯ ನವನಿರ್ಮಿತ ಕೊಠಡಿ ಶಾರದಾದೇವಿ ಲೋಕಾರ್ಪಣೆ

**ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗದಲ್ಲಿ ಚಟುವಟಿಕೆಯಾಧಾರಿತ ಶಿಕ್ಷಣವನ್ನು ಆದ್ಯತೆಯಾಗಿರಿಸಿ, ಷಟ್ಕೋನಾಕೃತಿಯ, ತಂತ್ರಜ್ಞಾನಾಧಾರಿತ ಕುಟೀರ ಮಾದರಿಯ 1ನೇ ತರಗತಿ ಕೊಠಡಿ ಲೋಕಾರ್ಪಣೆಗೊಂಡಿತು.**

ಕಾರ್ಕಳ ಶ್ರೀರಾಮಕೃಷ್ಣ ಶಾರದಾಶ್ರಮ, ಬೈಲೂರು ಇದರ ಸ್ಥಾಪಕರಾದ ಶ್ರೀಮತಿ ಸುಮತಾ ನಾಯಕ್ ಅಮ್ಮುಂಜೆ ಗಂಟೆ ಬಾರಿಸುವ ಮೂಲಕ ಉದ್ಘಾಟಿಸಿದರು. ಮಂಗಳೂರು ಎಸ್.ಡಿ.ಎಂ.ಟಿ ಸ್ಥಾಪಕ ಟ್ರಸ್ಟಿಗಳಾದ ಲತಾ ಜೆ ರಾವ್ ಇವರು ತುಳಸಿಪೂಜೆ ನೆರವೇರಿಸಿದರು.

ಎ.ಆರ್.ಎಂ ಮೋಟಾರ್ಸ್ ಪ್ರೈವೆಟ್ ಲಿಮಿಟೆಡ್ ಮಂಗಳೂರು ಇದರ ಆಡಳಿತ ಪಾಲುದಾರರಾದ ಆಶಾ ರಾವ್, ಮಂಗಳೂರು ಎ.ಜೆ ಮೆಡಿಕಲ್ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಮತ್ತು ಜನಲರ್ ಆ್ಯಂಡ್ ಲ್ಯಾಪ್ರೊಸ್ಕೋಪಿಕ್ ತಜ್ಞರಾಗಿರುವ ಡಾ॥ ಕಿಶನ್ ರಾವ್ ಬಾಳಿಲ, ಮಂಗಳೂರಿನ ಸಾವಿತ್ರಿ ದೇವಿ ಮೆಮೋರಿಯಲ್ ಟ್ರಸ್ಟ್‌ನ ಆಡಳಿತ ನಿರ್ದೇಶಕರಾದ ಶ್ರೀ ವಿಶ್ವಾಸ್ ರಾವ್, ಹಾಗೂ ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು. ಬಳಿಕ ಸಭಾಕಾರ್ಯಕ್ರಮ ನಡೆಯಿತು.

ವಿವರ ಒಳಪುಟಗಳಲ್ಲಿ







**ದಕ್ಷಿಣ ಕನ್ನಡ ಜಿಲ್ಲಾ ಶಿಶುವಾಟಿಕ ಆಚಾರ್ಯ ಪ್ರಶಿಕ್ಷಣ 22.7.23:** ಪದವಿ ವಿಭಾಗದ ಪ್ರೇರಣಾ ಸಭಾಂಗಣದಲ್ಲಿ ಎರಡು ದಿನಗಳ ಸನಿವಾಸ ಶಿಶುವಾಟಿಕ ಆಚಾರ್ಯ ಪ್ರಶಿಕ್ಷಣ ವರ್ಗ ನಡೆಯಿತು. ಡಾ॥ ಪ್ರಭಾಕರ ಭಟ್, ವಿದ್ಯಾಭಾರತಿ ಕ್ಷೇತ್ರೀಯ ಸಹಸಂಘಟನಾ ಕಾರ್ಯದರ್ಶಿ ಜಿ.ಆರ್. ಜಗದೀಶ್, ಶಿಶುವಾಟಿಕ ಪ್ರಮುಖರಾದ ಶ್ರೀಮತಿ ತಾರಾ ಆಚಾರ್ಯ, ಭ॥ ಸ್ವರ್ಣ, ಡಾ॥ ಕಮಲಾ ಭಟ್, ಶ್ರೀ ವಸಂತ ಮಾಧವ, ಶ್ರೀ ಲೋಕಯ್ಯ.ಡಿ, ಶ್ರೀ ವೆಂಕಟರಮಣ ಮಂಕುಡೆ, ಇವರು ಮಾರ್ಗದರ್ಶನ ಮಾಡಿದರು. ಶಿಶುಮಂದಿರದ ಆಡಳಿತ ಸಮಿತಿ ಸದಸ್ಯೆಯರು, ಜಿಲ್ಲಾ ಶಿಶುವಾಟಿಕಾ ಪ್ರಮುಖರಾದ ಶ್ರೀಮತಿ ಚೇತನಾ ಹೆಗ್ಡೆ ಹಾಗೂ ಶಾಲಾ ವಿಭಾಗದ ಮುಖ್ಯಸ್ಥರು ಉಪಸ್ಥಿತರಿದ್ದರು.



**ಗುರುಪೂಜೆ 11.07.2023**

ಶಿಶುಮಂದಿರದ ಸಭಾಂಗಣ ಶ್ರೀಲಕ್ಷ್ಮೀಯಲ್ಲಿ ನಡೆದ ಗುರುಪೂಜಾ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಸಹಶಿಕ್ಷಕಿ ಶ್ರೀಮತಿ ಶ್ವೇತಾ ಮಾತಾಜಿ ಕಥೆಯ ಮೂಲಕ ಗುರುವಿನ ಮಹತ್ವವನ್ನು ತಿಳಿಸಿದರು. ಒಟ್ಟು 151 ಸಂಖ್ಯೆಯಲ್ಲಿ ಮಕ್ಕಳು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ



**ಔಷಧೀಯ ಗಿಡಮೂಲಿಕಾ ವನನಿರ್ಮಾಣ 1.7.23**

ವಿವೇಕಾನಂದ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಔಷಧೀಯ ಸಸ್ಯಗಳ ಸಂರಕ್ಷಣೆ, ಸಂವರ್ಧನೆ, ಬಳಕೆ ಉದ್ದೇಶದಿಂದ ವಿದ್ಯಾರ್ಥಿಗಳು ಒಂದೊಂದು ಬಗೆಯ ಔಷಧೀಯ ಗಿಡಗಳನ್ನು ತಂದು ಶಾಲಾ ಕೈದೋಟದಲ್ಲಿ ನೆಟ್ಟರು.



**ವೇಣು ತರಗತಿ ಆರಂಭ : 1.7.2023**

ಶ್ರೀ ಉಮೇಶ್ ಕುಲಕರ್ಣಿ ನೇತೃತ್ವದಲ್ಲಿ ವೇಣು ತರಗತಿಯು ಆರಂಭವಾಯಿತು. ಒಟ್ಟು 87 ವಿದ್ಯಾರ್ಥಿಗಳು ಈ ತರಬೇತಿಯು ಪಡೆದು-ಕೊಂಡಿದ್ದಾರೆ.



ವಿವಿಧ ಹೂಗಳ ಪರಿಚಯ : 22.7.2023

4ನೇ ತರಗತಿಯ ಪರಿಸರ ಅಧ್ಯಯನದ ಪುಷ್ಪರಾಗ ಪಾಠಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿದ್ದ ವಿವಿಧ ಹೂವುಗಳನ್ನು ಸಂಗ್ರಹಿಸಿ ಪರಿಚಯಿಸಲಾಯಿತು.



**ತಾಲೂಕಿನಲ್ಲಿ ದ್ವಿತೀಯ : 24.7.2023**

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ ಇದರ ಸಹಯೋಗದಲ್ಲಿ ನಡೆದ ತಾಲೂಕು ಮಟ್ಟದ ಕರಾಟೆ ಸ್ಪರ್ಧೆಯಲ್ಲಿ 6ನೇ ತರಗತಿಯ ಮಾನಸ ದ್ವಿತೀಯ ಸ್ಥಾನ ಪಡೆದಿರುತ್ತಾಳೆ.



**ಭಜನೆ-ಸಾಮೂಹಿಕ ಹುಟ್ಟುಹಬ್ಬ : 29.7.23**

ಜುಲಾಯಿ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ಕಾರ್ಯಕ್ರಮದ ಮಹತ್ವವನ್ನು ಪ್ರಾಥಮಿಕ ವಿಭಾಗದ ಶ್ರೀಮತಿ ದಿವ್ಯ ತಿಳಿಸಿಕೊಟ್ಟರು.



**ಹಣ್ಣುಗಳ ಪರಿಚಯ : 31.7.2023**

1ನೇ ತರಗತಿಯವರ ಪರಿಸರ ಅಧ್ಯಯನ ಪಾಠಕ್ಕೆ ಸಂಬಂಧಿಸಿದಂತೆ 1 ನೇ ತರಗತಿಯ ವಿದ್ಯಾರ್ಥಿಗಳು ವಿಭಾಗವಾರು ಹಣ್ಣುಗಳನ್ನು ತಂದು ಅದರ ಪರಿಚಯ ಮಾಡಿಕೊಂಡರು.

## ಸೆಕೆಂಡರಿ ಸ್ಕೂಲ್



**ಸ್ಮಾರ್ಟ್‌ಬೋರ್ಡ್ ಒರಿಯಂಟೇಶನ್ 25.7.23**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಶಿಕ್ಷಕರಿಗೆ ಸ್ಮಾರ್ಟ್ ಬೋರ್ಡ್ ಒರಿಯಂಟೇಶನ್ ಕಾರ್ಯಕ್ರಮ ನಡೆಯಿತು. ಕಾರ್ಯಗಾರದಲ್ಲಿ ಶಿಕ್ಷಕರಿಗೆ ಸ್ಮಾರ್ಟ್ ಬೋರ್ಡ್ ಬಳಕೆ ಮತ್ತು ಉಪಯೋಗದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗಿರೀಶ್ ಮತ್ತು ಶ್ರೀ ಕಿಶೋರ್‌ರವರು ತರಬೇತಿ ನೀಡಿದರು.



**ವಿವೇಕ ಸಂಜೀವಿನಿ ಕಾರ್ಯಕ್ರಮ 13.07.2023**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ವಿವೇಕ ಸಂಜೀವಿನಿ ಪರಿಕಲ್ಪನೆಯಲ್ಲಿ ಔಷಧೀಯ ಸಸ್ಯಗಳ ಸಂರಕ್ಷಣೆಗೆ ಗಿಡಗಳ ತಯಾರಿ ಕಾರ್ಯಕ್ರಮ ನಡೆಸಲಾಯಿತು. ಈ ಶೈಕ್ಷಣಿಕ ವರ್ಷದಲ್ಲಿ ತಮ್ಮ ಮನೆಯಲ್ಲಿ ಕನಿಷ್ಠ 5 ಆಯುರ್ವೇದ ಗಿಡಗಳನ್ನು ನೆಡುವ ಯೋಜನೆಯಂತೆ ಈ ಕಾರ್ಯಕ್ರಮ ನಡೆಯಿತು.



**ಕರಾಟೆಯಲ್ಲಿ ಜಿಲ್ಲಾ ಮಟ್ಟಕ್ಕೆ ಆಯ್ಕೆ 24.07.2023**

ದ.ಕ ಜಿಲ್ಲಾ ಪಂ.ಶಾಲಾ ಶಿಕ್ಷಣ ಇಲಾಖೆ, ಬಂ.ತಾ. ಮಟ್ಟದ 14-17ವರ್ಷದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಕರಾಟೆ ಸ್ಪರ್ಧೆಯಲ್ಲಿ 10ನೇ ತರಗತಿಯ ರಕ್ಷಿತ್, ಶ್ರವಣ್, ಯಶಸ್ ಮತ್ತು 9ನೇ ತರಗತಿಯ ಸುಮೇಧಾ ಪ್ರಥಮ ಸ್ಥಾನ ಗಳಿಸಿ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

# ಸುಭಾಷಿತ ಮಂಜರಿ

ನನು ದೀಪಃ ಸ್ವಮಾತ್ಮಾನಂ
ಸ್ವಾತ್ಮನೈವಾವಭಾಸಯನ್ ।
ದೃಷ್ಟೋ ದೀಪಪ್ರಕಾಶಾರ್ಥಂ
ನ ಹಿ ದೀಪಾಂತರಾಹೃತಿಃ

ಬೃಹದಾರಣ್ಯಕವಾರ್ತಿಕ,
ದೀಪವು ತನ್ನನ್ನು ತಾನೇ ಪ್ರಕಾಶಗೊಳಿಸುತ್ತದೆ. ದೀಪವನ್ನು ನೋಡಲು ಬೇರೆ ದೀಪ ಬೇಡ.

**ಸಂಪಾದಕೀಯ**

ಆತ್ಮೀಯ ಓದುಗರೇ,

ಸಹಜ ಕಲಿಕೆಗೆ ಪೂರಕ ವಾತಾವರಣ ಸೃಷ್ಟಿಸಬೇಕೆಂಬ ಯೋಜನೆಯಂತೆ ಮಾಹಿತಿ ಗೋಡೆ, ಕಲಿಕಾ ಚಪ್ಪರ ಹಾಗೂ ತಂತ್ರಜ್ಞಾನದ ಬಳಕೆ ಮಾಡಿಕೊಂಡು ಒಂದನೇ ತರಗತಿಯ ಮಾದರಿ ಕುಟೀರ ನಿರ್ಮಿಸುವ ಯೋಜನೆಗೆ ಈ ಬಾರಿ ಜಾರಿಗೆ ಬಂದಿದೆ. ಅದಕ್ಕಾಗಿಯೇ ಶಾರದಾದೇವಿ ಕುಟೀರದ ಲೋಕಾರ್ಪಣೆಯಾಗಿದೆ. ಜೊತೆಗೆ ವಿವಿಧ ವಿಭಾಗಗಳ ಆಗತ ಸ್ವಾಗತ, ತರಬೇತಿ ಕಾರ್ಯಕ್ರಮಗಳು ಮತ್ತು ಇತರ ಶೈಕ್ಷಣಿಕ ಕಾರ್ಯಕ್ರಮಗಳು ವೇಗ ಪಡೆದುಕೊಂಡಿವೆ. ಇದೆಲ್ಲಕ್ಕಿಂತ ಭಿನ್ನವಾಗಿ ಪದವಿ ವಿಭಾಗದ ವರ್ಷದ ಕೊನೆಯಲ್ಲಿ ನಡೆಯುವ ಕಾರ್ಯಕ್ರಮಗಳ ವರದಿ ಇದೆ. ಹಾಗೂ ಈ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳ ಹಾಗೂ ಇನ್ನಿತರ ಅಂಕಿ ಅಂಶಗಳ ಮಾಹಿತಿಯೂ ಈ ಬಾರಿಯ ಸಂಚಿಕೆಯಲ್ಲಿ ಇದೆ. ಎಂದಿನಂತೆ ಓದಿ ಪ್ರತಿಕ್ರಿಯೆ ನೀಡಿ. ವಂದನೆಗಳು.

ವಂದನೆಗಳೊಂದಿಗೆ

ಸಂಪಾದಕ ಬಳಗ


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ರಮ್ಯ (ಸೆಕೆಂಡರಿ ಸ್ಕೂಲ್)
ರಮೇಶ್ (ಪಿಯುಸಿ)
ಪ್ರಸನ್ನಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


**ವಿಶೇಷ ತರಗತಿ 03.07.2023**

ಶಿಶುಮಂದಿರದಿಂದ ಒಂದನೇ ತರಗತಿಗೆ ಹೋಗುವ ಮಕ್ಕಳಿಗೆ ಗುರು ಪೂರ್ಣಿಮೆಯ ಶುಭದಿನದಂದು ಹಿರಿಯರ ಆಶೀರ್ವಾದದೊಂದಿಗೆ ಮಧ್ಯಾಹ್ನ ನಂತರದ 1 ಗಂಟೆಯ ವಿಶೇಷ ತರಗತಿಯನ್ನು ಪ್ರಾರಂಭಿಸಲಾಯಿತು.

## ಪ್ರಾಥಮಿಕ ಶಾಲೆ

**ಅಧ್ಯಾಪಕರ ಬೈಠಕ್ : 1.7.2023**

ಅಧ್ಯಾಪಕರ ಬೈಠಕ್ ಮುಖ್ಯೋಪಾಧ್ಯಾಯರ ಮಾರ್ಗದರ್ಶನದಲ್ಲಿ ನಡೆಯಿತು. ಶಾರದಾದೇವಿ ಕುಟೀರ ಉದ್ಘಾಟನೆಯ ಕುರಿತು ಚರ್ಚಿಸಿ ಜವಾಬ್ದಾರಿ ಹಂಚಿಕೆ ಮಾಡಲಾಯಿತು.

**ಶಾರದಾದೇವಿ ಕುಟೀರದಲ್ಲಿ ಗಣಹೋಮ: 3.7.23**

ನೂತನವಾಗಿ ನಿರ್ಮಿಸಲಾದ ಶಾರದಾದೇವಿ ಕುಟೀರದಲ್ಲಿ, ಸಂಸ್ಥೆಯ ಹಿರಿಯರಾದ ಶ್ರೀಯುತ ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ಶ್ರೀಮತಿ ಕಮಲಾ ಪ್ರಭಾಕರ್ ಭಟ್ ನೇತೃತ್ವದಲ್ಲಿ ಗಣಹೋಮ ನಡೆಯಿತು. ವಿದ್ಯಾಕೇಂದ್ರದ ಎಲ್ಲಾ ವಿಭಾಗದ ಮುಖ್ಯಸ್ಥರು, ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ರಘುರಾಜ್, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಸಾಲ್ಯಾನ್, ಅಧ್ಯಾಪಕ ವೃಂದದವರು ಹಾಗೂ 1ನೇ ತರಗತಿಯ ಪುಟಾಣಿಗಳು ಉಪಸ್ಥಿತರಿದ್ದರು.

**ಕಥಾಕಥನ ಸ್ಪರ್ಧೆ : 12.7.2023**

ಶಾಲಾ ಮಟ್ಟದ ಸಂಸ್ಕೃತಿ ಜ್ಞಾನ ಪರಿಚಯದ ಕಥಾಕಥನ ಸ್ಪರ್ಧೆಯನ್ನು ಬಾಲವರ್ಗ ಹಾಗೂ ಶಿಶುವರ್ಗದ ವಿದ್ಯಾರ್ಥಿಗಳಿಗೆ ವಿಕ್ರಮ ತರಗತಿಯಲ್ಲಿ ಆಯೋಜಿಸಲಾಯಿತು. 14 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದರು.

**ರಸಪ್ರಶ್ನೆ ಸ್ಪರ್ಧೆ : 13.7.2023**

ಸಂಸ್ಕೃತಿ ಜ್ಞಾನ ಪರಿಚಯದ ರಸಪ್ರಶ್ನೆ ಸ್ಪರ್ಧೆಯನ್ನು ವಿಕ್ರಮ ಹಾಗೂ ಜಗದೀಶ್‌ಚಂದ್ರ ಬೋಸ್ ತರಗತಿಯಲ್ಲಿ ನಡೆಸಲಾಗಿದ್ದು, ಬಾಲವರ್ಗದ 16 ಹಾಗೂ ಶಿಶುವರ್ಗದ 12 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದರು.

**ಔಷಧೀಯ ಗಿಡ ಸರಣಿ ಕಾರ್ಯಕ್ರಮ: 13.7.2023**

ವಿವೇಕ ಸಂಜೀವಿನಿಯ ಔಷಧೀಯ ಗಿಡಗಳ ಪರಿಚಯ ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರು ತುಳಸೀ ಗಿಡದ ಮಹತ್ವವನ್ನು ತಿಳಿಸುವುದರ ಮೂಲಕ ಆರಂಭಿಸಲಾಯಿತು. ಪೂರ್ವಗುರುಕುಲದ ಅಧ್ಯಾಪಕರು ಹಾಗೂ ಹಿರಿಯ ವಿಭಾಗದ ಅಧ್ಯಾಪಕರು 2 ವಿಭಾಗಗಳಲ್ಲಿ ದಿನಕ್ಕೊಂದು ಔಷಧೀಯ ಗಿಡಗಳ ಪರಿಚಯವನ್ನು ಗಿಡಗಳ ಸಹಿತ ಮಾಡಿಕೊಟ್ಟರು.

**ಜಿಲ್ಲಾ ಶೈಕ್ಷಣಿಕ ಸಹಮಿಲನದಲ್ಲಿ ಭಾಗಿ : 15.7.23**

ಮಂಗಳೂರಿನ ಶಾರದಾ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಇಲ್ಲಿ ನಡೆದ ವಿದ್ಯಾಭಾರತಿ ಕರ್ನಾಟಕ ಇವರು ಆಯೋಜಿಸಿದ ಜಿಲ್ಲಾ ಶೈಕ್ಷಣಿಕ ಸಹಮಿಲನದಲ್ಲಿ ಪ್ರಾಥಮಿಕ ವಿಭಾಗದ ಎಲ್ಲಾ ಅಧ್ಯಾಪಕರು ಭಾಗವಹಿಸಿದರು. ಜ್ಞಾನ ವಿಜ್ಞಾನ ಮೇಳದಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಾದ ಮೋನಿಷಾ ಹಾಗೂ ಸಾನ್ವಿ ಕಾಮತ್‌ರವರನ್ನು ಅಭಿನಂದಿಸಲಾಯಿತು.

**2ನೇ ತರಗತಿಯ ಪೋಷಕರ ಸಭೆ : 22.7.2023**

ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪೋಷಕರ ಸಭೆಯನ್ನು ಆರ್ಯಭಟದಲ್ಲಿ ನಡೆಸಿ ಅವರ ಅಭಿಪ್ರಾಯ ಸಂಗ್ರಹಿಸಲಾಯಿತು. 25 ಪೋಷಕರು ಉಪಸ್ಥಿತರಿದ್ದರು. ಶೈಕ್ಷಣಿಕ ಪರಿವೀಕ್ಷಕರಾದ ಮಲ್ಲಿಕಾ ಶೆಟ್ಟಿ, ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಹಾಗೂ ಸುಮಂತ್ ಆಳ್ವ ಎಂ ಉಪಸ್ಥಿತರಿದ್ದರು.

**ಅಧ್ಯಾಪಕರ ಬೈಠಕ್ : 25.7.2023**

ಸಂಸ್ಥೆಯ ಸಂಸ್ಥಾಪಕರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಹಾಗೂ ಸಂಚಾಲಕರಾದ ಶ್ರೀ ವಸಂತ ಮಾಧವ ಇವರೊಂದಿಗೆ ಪ್ರಾಥಮಿಕ ವಿಭಾಗದ ಅಧ್ಯಾಪಕರ ಬೈಠಕ್ ನಡೆಸಲಾಯಿತು. ಬೈಠಕ್‌ನ ಕೊನೆಯಲ್ಲಿ ಹಿರಿಯರೊಂದಿಗೆ ಹಲಸಿನ ಹಣ್ಣು ತಿಂದು ಸಂಭ್ರಮಿಸಲಾಯಿತು.

**ಯೋಗಾಸನದಲ್ಲಿ ಚತುರ್ಥ : 28.7.2023**

7ನೇ ತರಗತಿಯ ಗುರುನಂದನ್, ಸರಸ್ವತಿ ವಿದ್ಯಾಲಯ ಕಡಬ ಇಲ್ಲಿ ವಿದ್ಯಾಭಾರತಿ ಕರ್ನಾಟಕ ಇವರು ನಡೆಸಿದ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಚತುರ್ಥ ಸ್ಥಾನ ಪಡೆದಿತ್ತಾರೆ.

**ಕಂಪ್ಯೂಟರ್ ಶಿಕ್ಷಕರ ಕಾರ್ಯಾಗಾರ : 29 ಮತ್ತು 30**

ಶ್ರೀರಾಮ ಪ್ರೌಢಶಾಲೆಯಲ್ಲಿ ವಿವೇಕಾನಂಧ ವಿದ್ಯಾವರ್ಧಕ ಸಂಘದ ವತಿಯಿಂದ ನಡೆದ ಕನ್ನಡ ಮಾಧ್ಯಮ ಶಾಲೆಯ ಕಂಪ್ಯೂಟರ್ ಶಿಕ್ಷಕರಿಗೆ ನಡೆದ ಕಂಪ್ಯೂಟರ್ ಕಾರ್ಯಾಗಾರದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀಮತಿ ರೇಖಾ, ಶ್ರೀಮತಿ ಮಾಲತಿ ಟಿ ಹಾಗೂ ಕು. ಚೈತ್ರಾ ಬಿ.ಕೆ ಭಾಗವಹಿಸಿದರು.

## ಪ್ರೌಢಶಾಲೆ

**ಸಾಮೂಹಿಕ ಭಜನೆ – ಹುಟ್ಟುಹಬ್ಬ 1.07.2023**

ಸಾಮೂಹಿಕ ಭಜನೆ ಮತ್ತು ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಪದವಿ ಪೂರ್ವ ವಿದ್ಯಾಲಯದ ಶ್ರೀ ರಮೇಶ್ ಇವರು ವಿದ್ಯಾರ್ಥಿಗಳಿಗೆ ಹುಟ್ಟುಹಬ್ಬದ ಮಹತ್ವವನ್ನು ತಿಳಿಸುತ್ತಾ ಮಕ್ಕಳಿಗೆ ಶುಭಾಶಯವನ್ನು ಕೋರಿದರು. ಮುಖ್ಯೋಪಾಧ್ಯಾಯರು ಉಪಸ್ಥಿರಿದ್ದರು.

**ಸಾಂಸ್ಕತಿಕ ಭಾರತ ಪ್ರವಚನ ಆವೃತ್ತಿ–4 1.07.23**

ಶ್ರೀರಾಮ ಪದವಿಪೂರ್ವ ವಿದ್ಯಾಲಯದ ಶ್ರೀ ರಮೇಶ್ ಶ್ರೀಮಾನ್ ಇವರು ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಭಾರತ ಪ್ರವಚನ ಮಾಲಿಕೆ ಆವೃತ್ತಿಯಲ್ಲಿ ಸಪ್ತಸಾಗರ ಮಾಹಿತಿಯ ಕುರಿತು ತಿಳಿಸಿಕೊಟ್ಟರು.

**ಗುರುಪೂರ್ಣಿಮೆ 3.07.2023**

ಆಷಾಡ ಪೂರ್ಣಿಮೆಯಾದ ಗುರುಪೂರ್ಣಿಮೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ತಿಳಿಸಿಕೊಟ್ಟರು.

**ಆಗತ–ಸ್ವಾಗತ ಕಾರ್ಯಕ್ರಮ 14.07.2023**

ದಿನಾಂಕ 14.07.2023 ರಂದು ಶ್ರೀರಾಮ ಪ್ರೌಢಶಾಲೆಯಲ್ಲಿ ಎಂಟನೇ ತರಗತಿಗೆ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳ ಆಗತ–ಸ್ವಾಗತ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳಿಂದ ಭಾರತ ಮಾತೆಗೆ ಪುಷ್ಪಾರ್ಚನೆ, ಘೃತಾಹುತಿ ಮಾಡಿ ಹಿರಿಯ–ರಿಂದ ಆಶೀರ್ವಾದ ಪಡೆದರು. ಶ್ರೀರಾಮ ವಿದ್ಯಾ–ಕೇಂದ್ರದ ಸ್ಥಾಪಕರಾದ ಡಾ! ಪ್ರಭಾಕರ ಭಟ್ ಇವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಮುಖ್ಯಅತಿಥಿಗಳಾದ ಶ್ರೀ ಸುಧೀರ್ ಪೈ ಎಂ, ನಿವೃತ್ತ ಅನುಭವಿ ಪಿ.ಓ, ಭಾರತೀಯ ನೌಕಾಪಡೆ ಇವರು ಮಾತಾನಾಡಿದರು. ಕಿರಣ್ ಬಿ ಮುಖ್ಯ ಜನರಲ್ ಮ್ಯಾನೇಜರ್ ಯೋಜನಾ ವಿಭಾಗ ಎಂ.ಆರ್.ಪಿ.ಎಲ್, ಮಂಗಳೂರು, ಚಿದಾನಂದ ಕೆದಿಲಾಯ ವಕೀಲರು ಹಾಗೂ ಅಧ್ಯಕ್ಷರು, ನಾಗರಿಕ ಮಂಡಳಿ ಮಂಗಳೂರು, ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಎನ್.ಸಿ.ಸಿ ಶಿಬಿರದಲ್ಲಿ ಪಾಲ್ಗೊಂಡ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ವೇದಿಕೆಯಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ಕರ್ನಾಟಕ ಪ್ರಾಂತ್ಯದ ಕಾರ್ಯಕಾರಿಣಿ ಸದಸ್ಯೆ ಡಾ! ಕಮಲಾ ಪ್ರಭಾಕರ ಭಟ್, ಡಾ ಪ್ರಕಾಶ್ ಶೆಟ್ಟಿ ವೈದ್ಯರು, ವಿಶ್ವಾಸ್ ವಿ ಎಸ್ ರಾವ್, ಸಾವಿತ್ರಿದೇವಿ ಮೆಮೋರಿಯಲ್ ಟ್ರಸ್ಟ್ ಮಂಗಳೂರು, ವಿದ್ಯಾಕೇಂದ್ರದ ಅಧ್ಯಕ್ಷರು ಶ್ರೀ ನಾರಾಯಣ ಸೋಮಯಾಜಿ, ಸಹಸಂಚಾಲಕರು ಶ್ರೀ ರಮೇಶ್ ಎನ್, ಶ್ರೀಮತಿ ಶಾಂಭವಿ, ಶ್ರೀ ಗೋಪಾಲ. ಎಂ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಭೂಷನ್ ಮತ್ತು ಸಹನಾ ನಿರೂಪಿಸಿ, ನಿಖಿತಾ ಸ್ವಾಗತಿಸಿ, ಮೇಘಶ್ರೀ ವಂದಿಸಿದಳು.

**ಹತ್ತನೇ ತರಗತಿ ವಿದ್ಯಾರ್ಥಿಗಳ ಪೋಷಕರ ಆಪ್ತ ಸಮಾಲೋಚನಾ ಸಭೆ 21.07.2023**

ಹತ್ತನೇ ತರಗತಿ ವಿದ್ಯಾರ್ಥಿಗಳ ಪೋಷಕರ ಆಪ್ತಸಮಾಲೋಚನಾ ಸಭೆ ನಡೆಯಿತು. ಕಾರ್ಯಕ್ರಮದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತವಾಗಿರುವ ಹಾಗೂ ಯೋಗ ಗುರು ಬಾಬಾ ರಾಮದೇವ್ ಅವರಿಂದ ಪ್ರೇರೇಪಣೆಗೊಂಡು ಪ್ರಸುತ ಯೋಗ ತರಬೇತುದಾರರಾಗಿರುವ ಶ್ರೀಮತಿ ಸರಸ್ವತಿ ನೆಟ್ಲ ಇವರು ಪೋಷಕರಿಗೆ ವಿದ್ಯಾರ್ಥಿಗಳ ಹದಿಹರೆಯದ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಮಾಹಿತಿ ತಿಳಿಸಿಕೊಟ್ಟರು.

**ಬಾಲಗಂಗಾಧರ ತಿಲಕ್ ಮತ್ತು ಚಂದ್ರಶೇಖರ ಆಜಾದ್ ಜನ್ಮ ದಿನಾಚರಣೆ 24.07.2023**

ಕಾರ್ಯಕ್ರಮದಲ್ಲಿ ಹಿರಿಯ ಶಿಕ್ಷಕರಾದ ಜಿನ್ನಪ್ಪ ಶ್ರೀಮಾನ್ ಇವರು ಬಾಲಗಂಗಾಧರ ತಿಲಕ್ ಮತ್ತು ಚಂದ್ರಶೇಖರ್ ಅವರ ಜೀವನವನ್ನು ಮಕ್ಕಳಿಗೆ ತಿಳಿಸಿದರು. ವೇದಿಕೆಯಲ್ಲಿ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು.

**ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನೆ 29.07.2023**

ಭಜನೆಯಲ್ಲಿ ಕಾರ್ಯಕ್ರಮ ಪ್ರಾರಂಭಗೊಂಡಿತು. ಶ್ರೀರಾಮ ಸೆಕೆಂಡರಿ ಶಾಲೆಯ ಉಪಪ್ರಾಂಶುಪಾಲರಾದ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಮಕ್ಕಳಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ಕೋರಿದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾರು ಉಪಸ್ಥಿತರಿದ್ದರು.

**ಸಾಂಸ್ಕೃತಿಕ ಭಾರತ ಪ್ರವಚನ ಆವೃತ್ತಿ–5 29.7.23**

ಸಾಂಸ್ಕೃತಿಕ ಭಾರತ ಪ್ರವಚನ ಮಾಲಿಕೆ ಆವೃತ್ತಿ 5 ಕಾರ್ಯಕ್ರಮವನ್ನು ಶ್ರೀರಾಮ ಸೆಕೆಂಡರಿ ಶಾಲೆಯ ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಇವರು "ಸಪ್ತ–ಮೋಕ್ಷಧಾಮಗಳು" ಇದರ ಬಗ್ಗೆ ವಿವರಿಸಿದರು.

**ಕರಾಟೆ ತರಬೇತಿ ಉದ್ಘಾಟನೆ 29.7.23**

ಮಾರ್ಷಲ್ ಆರ್ಟ್ ತರಬೇತುದಾರರಾದ ರಾಜೇಶ್ ಬ್ರಹ್ಮರಕೂಟ್ಲು ಇವರು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಕರಾಟೆ, ಟೈಕೊಂಡೋ, ಜೂಡೋ ತರಬೇತಿಯನ್ನು ಪ್ರಾರಂಭಿಸಿದರು.

## ಸೆಕೆಂಡರಿ ಸ್ಕೂಲ್

**ಗುರುವಂದನೆ 11.07.2023**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿಗಳಿಗೆ ಗುರುವಂದನೆ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಪದವಿ ವಿಭಾಗದ ಮಾತಾಜಿಯಾದ ಶ್ರೀಮತಿ ಜಯಲಕ್ಷ್ಮೀಯವರು ಗುರುಪೂರ್ಣಿಮೆ ಆಚರಣೆಯ ರೀತಿ ಮತ್ತು ಗುರುವಂದನೆಯ ಮಹತ್ವದ ಬಗ್ಗೆ ತಿಳಿಸಿಕೊಟ್ಟರು.

**ಭಜನೆ – ಸಾಮೂಹಿಕ ಹುಟ್ಟುಹಬ್ಬ 12.07.2023**

ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮ ಜರಗಿತು. ಮಾತಾಜಿಯವರು ವಿದ್ಯಾರ್ಥಿಗಳಿಗೆ ಆರತಿ ಬೆಳಗಿ ತಿಲಕ ಧಾರಣೆ ಮಾಡಿದರು.

**ಗುರು ಪೂರ್ಣಿಮೆ ಕಾರ್ಯಕ್ರಮ 04.07.2023**

ಪದವಿ ಪೂರ್ವ ವಿದ್ಯಾಲಯದಲ್ಲಿ ಗುರು ಪೂರ್ಣಿಮೆ ಕಾರ್ಯಕ್ರಮವನ್ನು ನಡೆಸಲಾಯಿತು, ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ ಕುಮಾರ್ ಗುರು ಪೂರ್ಣಿಮೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು.

**ವಿವೇಕ ಸಂಜೀವಿನಿ ಕಾರ್ಯಕ್ರಮ 11.07.2023**

ವಿವೇಕ ಸಂಜೀವಿನಿ ಪರಿಕಲ್ಪನೆಯಲ್ಲಿ ಔಷಧೀಯ ಸಸ್ಯಗಳ ಸಂರಕ್ಷಣೆಗೆ ಗಿಡಗಳ ತಯಾರಿ ಕಾರ್ಯಕ್ರಮ ನಡೆಸಲಾಯಿತು.

**ಆಗತ– ಸ್ವಾಗತ ಕಾರ್ಯಕ್ರಮ 19.07.2023**

2023–24 ನೇ ಸಾಲಿನ ಶ್ರೀರಾಮ ಪದವಿಪೂರ್ವ ವಿಭಾಗದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಆಗತ ಸ್ವಾಗತ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರು ಹಾಗೂ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಆಗಿರುವ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಕಾರ್ಯಕ್ರಮದ ಅತಿಥಿಗಳಾದ ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಅಧಿಕಾರಿ ಅಶ್ವಿನ್ ಎಲ್ ಶೆಟ್ಟಿ, ರಿಯಲ್ ಎಸ್ಟೇಟ್ ಉದ್ಯಮಿ ಶ್ರೀ ಜಗದೀಶ್ ಗೌಡ, ಶ್ರೀ ಧೀರಜ್ ಹೆಜಮಾಡಿ ಮಾಜಿ ಉಪಾಧ್ಯಕ್ಷರು, ಇನ್ಫೋಸಿಸ್ ಮುಡಿಪು ಮಂಗಳೂರು, ಶ್ರೀ ರಾಘವೇಂದ್ರ ಹೊಳ್ಳ ,ಚೇರ್ ಮ್ಯಾನ್ ಸ್ವಸ್ತಿಕ್ ನ್ಯಾಷನಲ್ ಸ್ಕೂಲ್, ಮಂಗಳೂರು, ಶ್ರೀ ಅಭಿಷೇಕ್ ಭಂಡಾರಿ, ಪ್ರೊಪ್ರೈಟರ್ ಪೀಪ್ಲಿ ಹ್ಯೂಮನ್ ಕ್ಯಾಪಿಟಲ್, ಮಂಗಳೂರು ಶ್ರೀ ಸಂಜೀವ ಪೂಜಾರಿ ಅಧ್ಯಕ್ಷರು ,ಯಕ್ಷ ಭಾರತ ಸೇವಾ ಪ್ರತಿಷ್ಠಾನ, ವಿಟ್ಲ ಕೈಂತಿಲ ಸದಾಶಿವ ಆಚಾರ್ಯ, ಮಾಲಕರು, ಶ್ರವಣ ಜ್ಯುವೆಲರ್ಸ್ ವಿಟ್ಲ ಹಾಗೂ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಕು. ಸ್ವಾತಿ ಕಾರ್ಯಕ್ರಮ ನಿರೂಪಿಸಿ, ಕು. ಜಯಲಕ್ಷ್ಮೀ ಧನ್ಯವಾದಗೈದರು.

**ಡಿಜಿಟಲ್ ಬ್ಯಾಂಕಿಂಗ್ 21.07.2023**

ಶ್ರೀರಾಮ ಪದವಿಪೂರ್ವ ವಿದ್ಯಾಲಯದಲ್ಲಿ ಕಲಾ ವಿಭಾಗದ ವಿದ್ಯಾರ್ಥಿಗಳಿಗೆ ಭಗೀರಥ ಮಾನವಿಕ ಸಂಘದ ವತಿಯಿಂದ ಡಿಜಿಟಲ್ ಬ್ಯಾಂಕಿಂಗ್ ಬಗ್ಗೆ ವಿವೇಕಾನಂದ ಪದವಿ ಕಾಲೇಜ್ ಪುತ್ತೂರಿನ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ ಅರುಣ್ ಪ್ರಕಾಶ್ ವಿಶೇಷ ಉಪನ್ಯಾಸ ನೀಡಿ–ದರು. ಪ್ರಾಂಶುಪಾಲರಾದ ವಸಂತ ಬಲ್ಲಾಳ್ ಶ್ರೀಮಾನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾನವಿಕ ಸಂಘದ ನಿರ್ದೇಶಕರಾದ ನಯನ ಮಾತಾಜಿ ಮತ್ತು ಅರ್ಥಶಾಸ್ತ್ರ ಉಪನ್ಯಾಸಕರಾದ ಮಧುಸೂದನ ಶ್ರೀಮಾನ್ ಉಪಸ್ಥಿತರಿದ್ದರು.

**ವಿವೇಕ ಸಂಜೀವಿನಿ 22.07.2023**

ಪದವಿಪೂರ್ವ ವಿಭಾಗದ ವಿದ್ಯಾರ್ಥಿಗಳಿಂದ ಬಾಳ್ತಿಲ ಗ್ರಾಮಪಂಚಾಯತ್ ಆವರಣದಲ್ಲಿ ವಿವೇಕ ಸಂಜೀವಿನ ಕಾರ್ಯಕ್ರಮದ ಅನ್ವಯ ಗ್ರಾಮವನ ಅಂಗವಾಗಿ ಸುಮಾರು ಅರುವತ್ತು (60) ಔಷದೀಯ ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ನಡೆಸಲಾಯಿತು. ಉಪನ್ಯಾಸಕರಾದ ಅಶೋಕ್ ಕುಮಾರ್, ಮಹೇಂದ್ರ ಮಂಜುನಾಥ್ ಭಟ್ , ಶ್ರೀಮತಿ ಮಧುಶ್ರೀ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಕುಮಾರಿ ಹಿರಣ್ಮಯಿ ಹಾಗೂ ಸಿಬ್ಬಂದಿ ವರ್ಗದವರು ಸಹಕರಿಸಿದರು.

**ಮಾತೃಭಾರತಿ ಹಾಗೂ "ಶೇಷಾದ್ರಿ" ಪದವಿ ಪೂರ್ವ ಕಾಲೇಜು ಅಭಿವೃದ್ಧಿ ಸಂಘದ ಸಭೆ: 28.7.23**

ಪದವಿ ಪೂರ್ವ ವಿಭಾಗದಲ್ಲಿ "ಶೇಷಾದ್ರಿ" ಶ್ರೀರಾಮ ಪದವಿ ಪೂರ್ವ ಕಾಲೇಜು ಅಭಿವೃದ್ಧಿ ಸಂಘ ಮತ್ತು ಮಾತೃ ಭಾರತಿ ಸಮಿತಿಯ ಉದ್ಘಾಟನೆ ಕಾರ್ಯಕ್ರಮ ದೀಪ ಬೆಳಗುವ ಮೂಲಕ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀರಾಮ ವಿದ್ಯಾ-ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾ-ಕೇಂದ್ರದ ಕೋಶಾಧಿಕಾರಿಗಳಾದ ಶ್ರೀ ಸತೀಶ್ ಭಟ್ ಶಿವಗಿರಿ ಮತ್ತು ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಶ್ರೀಮಾನ್ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಾತೃ ಭಾರತಿ ಸಮಿತಿಯ ನಿರ್ದೇಶಕರಾದ ಕುಮಾರಿ ನಯನ ಕೆ. ಮಾತಾಜಿ ಇವರು ಮಾತೃ ಮಂಡಳಿಯ ಸದಸ್ಯರ ಮಾಹಿತಿ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಕನ್ನಡ ಉಪನ್ಯಾಸಕರಾದ ಶ್ರೀ ಗೋವಿಂದ ನಾರಾಯಣ ಶ್ರೀಮಾನ್ ಇವರು ನಿರ್ವಹಿಸಿದರು.

**ನಡವಳಿಕಾ ಶಿಕ್ಷಣ ಕಾರ್ಯಕ್ರಮ 31.07.2023**

ಶ್ರೀರಾಮ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳಿಗೆ ನಡವಳಿಕಾ ಶಿಕ್ಷಣ ಕಾರ್ಯಕ್ರಮ ನಡೆಸಲಾಯಿತು. ವಿದ್ಯಾಭಾರತಿಯ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಾದ ಲೋಕಯ್ಯ ಶ್ರೀಮಾನ್ ಮಾತನಾಡಿ ವಿದ್ಯಾರ್ಥಿಗಳು ದೈನಂದಿನ ಜೀವನದಲ್ಲಿ ಯಾವ ರೀತಿ ಪ್ರವರ್ತಿಸಬೇಕೆಂಬುದರ ಕುರಿತು ಮಾರ್ಗದರ್ಶನ ಮಾಡಿದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಕರುಣಾಕರ ಕಾರ್ಯಕ್ರಮ ನಿರ್ವಹಿಸಿದರು.

**ಗುರುಪೂರ್ಣಿಮಾ ಕಾರ್ಯಕ್ರಮ 03/07/2023**

ಪದವಿ ಮಹಾವಿದ್ಯಾಲಯದ ಸಂಸ್ಕೃತ ಸಂಘದ ವತಿಯಿಂದ ಗುರುಪೂರ್ಣಿಮಾ ಕಾರ್ಯಕ್ರಮ ನಡೆಯಿತು. ಮೊದಲಿಗೆ ವ್ಯಾಸಮಹರ್ಷಿಗಳ ಚಿತ್ರಕ್ಕೆ ದೀಪ ಪ್ರಜ್ವಲನ ಹಾಗೂ ಪುಷ್ಪಾರ್ಚನೆಗೈದು ಗೌರವ ಸಲ್ಲಿಸಲಾಯಿತು. ರಾಜ್ಯಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮೀ ಮಾತಾಜಿ ಗುರುಪೂರ್ಣಿಮೆಯ ಮಹತ್ವವನ್ನು ತಿಳಿಸಿದರು. ವೇದಿಕೆಯಲ್ಲಿ ಆಂಗ್ಲ ಉಪನ್ಯಾಸಕಿ ಶ್ರೀಮತಿ ಶ್ರೀದೇವಿ ಮಾತಾಜಿ, ಉಪಸ್ಥಿತರಿದ್ದರು. ಸಂಸ್ಕೃತ ಉಪನ್ಯಾಸಕಿ ಶ್ರೀಮತಿ ಪ್ರಸನ್ನಾ ಮಾತಾಜಿ ಸ್ವಾಗತಿಸಿ, ಬಿಎ ವಿದ್ಯಾರ್ಥಿನಿ ಕು. ಚಿಂತನಾ ವಂದಿಸಿ, ಬಿಎ ವಿದ್ಯಾರ್ಥಿನಿ ಕು. ಪದ್ಮಶ್ರೀ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮ ನಿರ್ವಹಣೆ, ಸ್ವಾಗತ, ವಂದನೆಗಳನ್ನು ಸಂಸ್ಕೃತ ಭಾಷೆಯಲ್ಲಿ ನಿರ್ವಹಿಸಿದ್ದು ಕಾರ್ಯಕ್ರಮದ ವಿಶೇಷತೆಯಾಗಿತ್ತು.

**ಉನ್ನತ ವ್ಯಾಸಂಗದ ಬಗ್ಗೆ ಮಾಹಿತಿ 6.7.23**

ಪದವಿ ಕಾಲೇಜಿನ ಅಂತಿಮ ವರ್ಷದ ಬಿಎಸ್ಸಿ ವಿದ್ಯಾರ್ಥಿಗಳಿಗೆ ವಿವೇಕಾನಂದ ಕಾಲೇಜು, Center for Post Graduate Studies and Research, ಇಲ್ಲಿನ ಉಪನ್ಯಾಸಕಿಯರಾದ ಡಾ. ಹರ್ಷಿತಾ ಹಾಗೂ ಶ್ರೀಮತಿ ಸ್ಮಿತಾ ಇವರು ಉನ್ನತ ವ್ಯಾಸಂಗದ ಕುರಿತು ಮಾಹಿತಿ ನೀಡಿ-ದರು.

**ವಾರ್ಷಿಕೋತ್ಸವ-ಪ್ರತಿಭಾ ಪುರಸ್ಕಾರ ಹಾಗೂ ಪ್ರತಿಭಾ ದಿನೋತ್ಸವ 2023 – 08.07.2023**

ಹೊಸ ಚಿಗುರು ಹಳೆಬೇರು ಕೂಡಿರಲು ಮರ ಸೊಬಗು ಎಂಬಂತೆ ಕಳೆದ 12 ವರ್ಷಗಳಿಂದ ಸನಾತನ ಭಾರತೀಯ ಸಂಸ್ಕೃತಿಯ ಜೊತೆಗೆ ಆಧುನಿಕ ಶಿಕ್ಷಣವನ್ನು ಒದಗಿಸುತ್ತಾ, ಪಠ್ಯ-ಪಠ್ಯೇತರ ಚಟುವಟಿಕೆಗಳಿಗೆ ಮಹತ್ವ ಕೊಡುತ್ತಾ ಬಂದಿರುವ ಶ್ರೀರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕ ಇಲ್ಲಿನ 2022-23ನೇ ವರ್ಷದ ವಾರ್ಷಿಕೋತ್ಸವ- ಪ್ರತಿಭಾ ಪುರಸ್ಕಾರ ಹಾಗೂ ಪ್ರತಿಭಾ ದಿನೋತ್ಸವ ನಡೆಯಿತು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನ ನಡೆಯಿತು. ನಂತರದಲ್ಲಿ ಸಭಾ ಕಾರ್ಯಕ್ರಮದ ಜೊತೆಗೆ ಪ್ರತಿಭಾ ಪುರಸ್ಕಾರ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ವಹಿಸಿದ್ದರು. ಕಾರ್ಯಕ್ರಮಕ್ಕೆ ಅಭ್ಯಾಗತರಾಗಿ ಆಗಮಿಸಿದ ಖ್ಯಾತ ಹಿನ್ನೆಲೆ ಧ್ವನಿ ಕಲಾವಿದರಾದ ಶ್ರೀ ಬಡೆಕ್ಕಿಲ ಪ್ರದೀಪ್, ಖ್ಯಾತ ಭಾಗವತರಾದ ಶ್ರೀಮತಿ ಅಮೃತಾ ಅಡಿಗ ಉಪಸ್ಥಿತರಿದ್ದರು. 2022-23ನೇ ಸಾಲಿನ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು, ವಿವಿಧ ಕಾಲೇಜು ಮಟ್ಟದ, ವಿಶ್ವವಿದ್ಯಾಲಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ, ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು, ಕಳೆದ ಶೈಕ್ಷಣಿಕ ವರ್ಷದಲ್ಲಿ 4ನೇ ರ್‍ಯಾಂಕ್ ಗಳಿಸಿದ ವಾಣಿಜ್ಯ ವಿದ್ಯಾರ್ಥಿನಿ ಕು. ನಿರೀಕ್ಷಾ ಇವರನ್ನು ಗುರುತಿಸಿ ಗೌರವಿಸಲಾಯಿತು. ಹಾಗೆಯೇ ದತ್ತಿನಿಧಿ ವಿತರಣೆಯು ಸಹ ನಡೆಯಿತು. "ಪಾಂಚಜನ್ಯ" ಹಿರಿಯ ವಿದ್ಯಾರ್ಥಿಗಳ ಸಂಘದ ಲಾಂಛನ (ಶಂಖ)ವನ್ನು ಈ ಸಂದರ್ಭದಲ್ಲಿ ಡಾ. ಭಟ್ ಅವರು ಬಿಡುಗಡೆಗೊಳಿಸಿದರು. ವೇದಿಕೆಯಲ್ಲಿ ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷರಾದ ಶ್ರೀ ರಾಜೇಶ್ ನರಿಂಗಾಣ ಹಾಗೂ ಅಮೃತಾ ಅಡಿಗ ಅವರ ತಾಯಿ ಶ್ರೀಮತಿ ಜಯಲಕ್ಷ್ಮೀ ಉಪಸ್ಥಿತರಿದ್ದು ಬಹುಮಾನ ವಿತರಿಸಿದರು. ಸಾಂಸ್ಕೃತಿಕ ಕಾರ್ಯಕ್ರಮಗಳ ನಿರ್ವಹಣೆಯನ್ನು ಕು. ಕೀರ್ತಿ ವಹಿಸಿದ್ದರೆ, ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಕು. ಹರ್ಷಿತಾ ನಡೆಸಿದರು. ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ್ ಸ್ವಾಗತಿಸಿ, ವಿದ್ಯಾರ್ಥಿನಿ ಕು. ಪ್ರತೀಕ್ಷಾ ವಂದಿಸಿದರು. ಮಧ್ಯಾಹ್ನದ ನಂತರದಲ್ಲಿ ಲಘು ಪ್ರಹಸನ ಹಾಗೂ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರಿಂದ "ಶ್ರೀರಾಮ ದರ್ಶನ" ಯಕ್ಷಗಾನ ಕಾರ್ಯಕ್ರಮವು ನಡೆಯಿತು. ಕೊನೆಯಲ್ಲಿ ಯಕ್ಷಗುರುಗಳಾದ ಮೋಹನ್ ಕುಮಾರ್ ಅಮ್ಮುಂಜೆಯವರನ್ನು ಡಾ. ಪ್ರಭಾಕರ ಭಟ್ ಅವರು ಶಾಲು ಹೊದಿಸಿ ಸನ್ಮಾನಿಸಿದರು. ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ ಕಾಣಿಕೆಯನ್ನರ್ಪಿಸಿದರು.

**ದೀಪ ಪ್ರದಾನ** 12/07/2023

12ನೇ ವರ್ಷದ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಆಜಾದ್ ಸಭಾಂಗಣದಲ್ಲಿ ನಡೆಯಿತು. ಅಂತಿಮ ಪದವಿ ವಿದ್ಯಾರ್ಥಿಗಳು ಮುಂದಿನ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಬೆಳಗುವ ದೀಪ ಕೊಡುವ ಮೂಲಕ ತಮ್ಮ ಜವಾಬ್ದಾರಿಗಳನ್ನು ಹಸ್ತಾಂತರಿಸಿದರು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ವಹಿಸಿದ್ದರು. ಮಂಗಳೂರು ವಿ. ವಿಯ ಪ್ರಭಾರ ಕುಲಪತಿಗಳಾದ ಡಾ. ಜಯರಾಜ್ ಅಮೀನ್, ಮಂಗಳೂರಿನ ಪ್ರೈಮ್ ಸಾಫಿಕ್ ಟೆಕ್ನಾಲಜಿಯ ಸಹ ಸಂಸ್ಥಾಪಕ ಹಾಗೂ ನಿರ್ದೇಶಕ ದುರ್ಗಾದಾಸ್ ಶೆಟ್ಟಿ, ಟಾಟಾ ಸೋಲಾರ್ ಪವರ್ ಡೀಲರ್ ಸರ್ವೇಶ್ ಸಾಮಗ, ಎಸ್.ಡಿ.ಎಂ ಕಾನೂನು ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕಿ ಡಾ. ರೇಶ್ಮಾ ಪ್ರಶಾಂತ್, ಸಾವಿತ್ರಿದೇವಿ ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್‌ನ ಆಡಳಿತ ನಿರ್ದೇಶಕ ವಿಶ್ವಾಸ್ ಎಸ್ ರಾವ್, ಶ್ರೀ ನಾರಾಯಣ ಸೋಮಯಾಜಿ, ಶ್ರೀ ರಮೇಶ್ ಎನ್, ಡಾ. ಕಮಲಾ ಪ್ರಭಾಕರ ಭಟ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾಚಾರ್ಯ ಶ್ರೀ ಕೃಷ್ಣಪ್ರಸಾದ್ ಸ್ವಾಗತಿಸಿ, ಕು. ಚೈತ್ರಾ ನಿರೂಪಿಸಿ, ಕು. ಸ್ವರ್ಣಲಕ್ಷ್ಮಿ ವಂದಿಸಿ, ಕು. ಪದ್ಮಶ್ರೀ ವೈಯಕ್ತಿಕ ಗೀತೆ ಹಾಡಿದರು.

# ಶ್ರೀರಾಮ ವಿದ್ಯಾಕೇಂದ್ರದ ವಿವಿಧ ವಿಭಾಗಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಸಿಬ್ಬಂದಿಗಳ ವಿವರ

ಶ್ರೀರಾಮ ಶಿಶುಮಂದಿರ

| ತರಗತಿ ಹೆಸರು | ಒಟ್ಟು | | |
|---|---|---|---|
| | ಗಂಡು | ಹೆಣ್ಣು | ಒಟ್ಟು |
| ಲವ | 18 | 11 | 29 |
| ಕುಶ | 16 | 12 | 28 |
| ಧ್ರುವ | 16 | 12 | 28 |
| ಹನುಮ | 12 | 16 | 28 |
| ಸೀತಾ | 12 | 16 | 28 |
| ಶಬರಿ | 17 | 11 | 28 |
| ಸಾಂದೀಪನಿ | 16 | 12 | 28 |
| **ಒಟ್ಟು** | **107** | **90** | **197** |
| ಶ್ರೀಗಣೇಶ ಶಿಶುಮಂದಿರ | 6 | 6 | 12 |
| ಶ್ರೀಕೃಷ್ಣ ಶಿಶುಮಂದಿರ | 21 | 22 | 43 |
| ಅಕ್ಕಮಹಾದೇವಿ ಶಿಶುಮಂದಿರ | 17 | 13 | 30 |
| ಸರಸ್ವತಿ ಶಿಶುಮಂದಿರ | 8 | 12 | 20 |
| **ಒಟ್ಟು** | **52** | **53** | **105** |

ಶ್ರೀರಾಮ ಪ್ರಾಥಮಿಕ ಶಾಲೆ

| | | | |
|---|---|---|---|
| 1ನೇ ಸುಧಾಮ | 14 | 10 | 24 |
| 1ನೇ ಶಾರದಾದೇವಿ | 12 | 13 | 25 |
| 1ನೇ ಅಬ್ಬಕ್ಕ | 12 | 13 | 25 |
| 1ನೇ ಶ್ರೀ ಕೃಷ್ಣ | 12 | 12 | 24 |
| 1ನೇ ಅರ್ಜುನ | 12 | 12 | 24 |
| 1ನೇ ನಚೀಕೇತ | 14 | 11 | 25 |
| 2ನೇ ಕೇಶವ | 15 | 12 | 27 |
| 2ನೇ ಮಾಧವ | 15 | 13 | 28 |
| 2ನೇ ಕನಕ | 14 | 13 | 27 |
| 2ನೇ ಗೌರಿ | 12 | 13 | 25 |
| 2ನೇ ಬಂಕಿಮ | 14 | 13 | 27 |
| 2ನೇ ಮೈತ್ರೇಯಿ | 13 | 13 | 26 |
| 3ನೇ ಸರಸ್ವತಿ | 18 | 11 | 29 |
| 3ನೇ ನೇತಾಜಿ | 16 | 13 | 29 |
| 3ನೇ ಶಿವಾಜಿ | 16 | 14 | 30 |
| 3ನೇ ತಿಲಕ | 18 | 10 | 28 |
| 3ನೇ ಕಬೀರ | 17 | 13 | 30 |
| 3ನೇ ಕಪಿಲ | 18 | 12 | 30 |
| 4ನೇ ಬಾಹುಬಲಿ | 14 | 13 | 27 |
| 4ನೇ ತಾನಾಜಿ | 11 | 15 | 26 |
| 4ನೇ ನಕುಲ | 15 | 11 | 26 |
| 4ನೇ ಶ್ರವಣ | 22 | 7 | 29 |
| 4ನೇ ಶಂಕರ | 14 | 13 | 27 |
| 4ನೇ ಅಶೋಕ | 15 | 11 | 26 |
| 5ನೇ ಅಹಲ್ಯಾ | 21 | 18 | 39 |
| 5ನೇ ಅರವಿಂದ | 23 | 17 | 40 |
| 5ನೇ ಚಂದ್ರಗುಪ್ತ | 22 | 16 | 38 |
| 5ನೇ ಭರತ | 21 | 17 | 38 |
| 5ನೇ ಪ್ರತಾಪ | 22 | 16 | 38 |
| 6ನೇ ಶ್ರೀಹರ್ಷ | 22 | 23 | 45 |
| 6ನೇ ನರೇಂದ್ರ | 20 | 23 | 43 |
| 6ನೇ ಸುಮಿತ್ರೆ | 21 | 23 | 44 |
| 6ನೇ ಶಂಕರ | 22 | 22 | 44 |
| 6ನೇ ಧಧೀಚಿ | 23 | 22 | 45 |
| 7ನೇ ವಿದ್ಯಾವತಿ | 22 | 20 | 42 |
| 7ನೇ ಭಾಮತೀ | 22 | 19 | 41 |
| 7ನೇ ಪಾಣಿನಿ | 24 | 20 | 44 |
| 7ನೇ ಭಗತ್ | 23 | 20 | 43 |
| 7ನೇ ಕೌಸಲ್ಯಾ | 23 | 22 | 45 |
| | **684** | **589** | **1273** |

ಶ್ರೀರಾಮ ಪ್ರೌಢಶಾಲೆ

| ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|
| 8 ಏಕಲವ್ಯ | 30 | 26 | 56 |
| 8 ಕಣ್ಣಗಿ | 33 | 26 | 59 |
| 8 ನರೇಂದ್ರ | 30 | 28 | 58 |
| 8 ಪ್ರಹ್ಲಾದ | 23 | 27 | 50 |
| 8 ನಚಿಕೇತ | 20 | 22 | 42 |
| 9 ಭಾಸ್ಕರ | 25 | 21 | 46 |
| 9 ನಿವೇದಿತಾ | 26 | 16 | 42 |
| 9 ಪತಂಜಲಿ | 26 | 16 | 42 |
| 9 ಚೆನ್ನಮ್ಮ | 33 | 27 | 60 |
| 9 ದೇವಶಿಲ್ಪಿ | 32 | 26 | 58 |
| 9 ಓಬವ್ವ | 31 | 26 | 57 |
| 10 ಆಜಾದ್ | 15 | 30 | **45** |
| 10 ಭರತ | 25 | 18 | **43** |
| 10 ಚ್ಯವನ | 24 | 19 | **43** |
| 10 ದುರ್ಗಾವತಿ | 20 | 22 | **42** |
| 10 ವಿಶ್ವೇಶ್ವರಯ್ಯ | 29 | 14 | **43** |
| 10 ಭಾರ್ಗವ | 31 | 12 | **43** |
| 10 ಗಾರ್ಗಿ | 30 | 14 | **44** |
| **ಒಟ್ಟು** | **483** | **390** | **873** |

ಶ್ರೀರಾಮ ಸೆಕೆಂಡರಿ ಸ್ಕೂಲ್, ಕಲ್ಲಡ್ಕ

| | | | |
|---|---|---|---|
| 9 ತೇಜಸ್ | 25 | 9 | 34 |
| 9 ಓಜಸ್ | 18 | 17 | 35 |
| 10 ಮೈತ್ರೇಯಿ | 29 | 22 | 51 |
| **ಒಟ್ಟು** | **72** | **48** | **120** |

ಶ್ರೀರಾಮ ಪದವಿಪೂರ್ವ ವಿದ್ಯಾಲಯ

| | | | |
|---|---|---|---|
| ಪ್ರಥಮ ಕಲಾ | 12 | 19 | 31 |
| ಪ್ರಥಮ ವಾಣಿಜ್ಯ | 94 | 95 | 189 |
| ಪ್ರಥಮ ವಿಜ್ಞಾನ | 41 | 75 | 116 |
| ದ್ವಿತೀಯ ಕಲಾ | 11 | 14 | 25 |
| ದ್ವಿತೀಯ ವಾಣಿಜ್ಯ | 117 | 98 | 215 |
| ದ್ವಿತೀಯ ವಿಜ್ಞಾನ | 65 | 94 | 159 |
| | **340** | **395** | **735** |

ಶ್ರೀರಾಮ ಪದವಿ ವಿದ್ಯಾಲಯ

| | | | |
|---|---|---|---|
| ಪ್ರಥಮ ಬಿಕಾಂ | 13 | 20 | 33 |
| ದ್ವಿತೀಯ ಬಿಕಾಂ | 16 | 16 | 32 |
| ತೃತೀಯ ಬಿಕಾಂ | 13 | 31 | 44 |
| ಪ್ರಥಮ ಬಿ ಎ | 4 | 7 | 11 |
| ದ್ವಿತೀಯ ಬಿ.ಎ | 2 | 11 | 13 |
| ಪ್ರಥಮ ಬಿ.ಸಿ.ಎ | 14 | 15 | 29 |
| ದ್ವಿತೀಯ ಬಿ.ಸಿ.ಎ | 26 | 35 | 61 |
| ತೃತೀಯ ಬಿ.ಸಿ.ಎ | 8 | 13 | 21 |
| | **96** | **148** | **244** |

| ವಿಭಾಗ | ಬೋಧಕರು | ಬೋಧಕೇತರರು | ಒಟ್ಟು |
|---|---|---|---|
| ಶಿಶುಮಂದಿರ | 12 | 9 | 21 |
| ಪ್ರಾಥಮಿಕ ಶಾಲೆ | 51 | 7 | 58 |
| ಪ್ರೌಢಶಾಲೆ | 33 | 8 | 41 |
| ಸೆಕೆಂಡರಿ ಸ್ಕೂಲ್ | 7 | 3 | 10 |
| ಪದವಿ ಪೂರ್ವ | 29 | 9 | 38 |
| ಪದವಿ | 15 | 9 | 24 |
| ಇತರ ಸಿಬ್ಬಂದಿಗಳು | – | – | 44 |
| ಒಟ್ಟು | 147 | 45 | 236 |

## ಒಟ್ಟು ವಿದ್ಯಾರ್ಥಿಗಳು

| | |
|---|---|
| ಶಿಶುಮಂದಿರ | 302 |
| ಪ್ರಾಥಮಿಕ ಶಾಲೆ | 1273 |
| ಪ್ರೌಢಶಾಲೆ | 873 |
| ಸೆಕೆಂಡರಿ ಸ್ಕೂಲ್ | 120 |
| ಪದವಿ ಪೂರ್ವ | 735 |
| ಪದವಿ | 244 |

# 3547

## ಒಟ್ಟು ಸಿಬ್ಬಂದಿಗಳು

# 236



**ಶಾಲಾ ಸಂಸತ್ತು ಉದ್ಘಾಟನೆ 8.7.2023**

2023–24ನೇ ಸಾಲಿನ ಶೈಕ್ಷಣಿಕ ವರ್ಷದ ಶಾಲಾ ಸಂಸತನ್ನು ಮುಖ್ಯೋಪಾಧ್ಯಾಯರು ದೀಪ ಬೆಳಗಿಸಿ, ಸಭಾಪತಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಸಭಾಪತಿಗಳು ಆಡಳಿತ ಪಕ್ಷದ ಎಲ್ಲಾ ಮಂತ್ರಿಗಳಿಗೆ ಪ್ರಮಾಣ ವಚನ ಬೋಧಿಸಿದರು.



**8ನೇ ತರಗತಿ ವಿದ್ಯಾರ್ಥಿಗಳ ಪೋಷಕರ "ಆಪ್ತ–ಸಮಾಲೋಚನಾ ಸಭೆ" 12.7.2023**

ಈ ಕಾರ್ಯಕ್ರಮದಲ್ಲಿ "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತವಾಗಿರುವ ಶ್ರೀಮತಿ ಸರಸ್ವತಿ ನೆಟ್ಲ ಇವರು ವಿದ್ಯಾರ್ಥಿಗಳ ಹದಿಹರೆಯದ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಮಾಹಿತಿ ತಿಳಿಸಿಕೊಟ್ಟರು.



**ಯೋಗ ತರಬೇತಿ ಕಾರ್ಯಕ್ರಮ 27.07.2023**

ವಿದ್ಯಾಭಾರತಿಯ ಯೋಜನೆಯಂತೆ ಒಂದು ದಿನ ಯೋಗ ಶಿಬಿರವನ್ನು ಮಧುಕರ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಶ್ರೀ ಸಂಜಯ್ ಮತ್ತು ಶ್ರೀ ಚಂದ್ರಶೇಖರ್ ಇವರು ತರಬೇತಿಯನ್ನು ನಡೆಸಿಕೊಟ್ಟರು. ತರಬೇತಿಯಲ್ಲಿ ಎಲ್ಲಾ ಶ್ರೀಮಾನ್ ಮಾತಾಜಿಗಳು ಉಪಸ್ಥಿತರಿದ್ದರು.



**"ಅಂತರಾಷ್ಟ್ರೀಯ ಚಂದ್ರನ ದಿನ" ವಿಷಯದ ಕಾರ್ಯಗಾರದಲ್ಲಿ ಭಾಗಿ 20.07.2023**

ಪಿಲಿಕುಳದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ "ಅಂತರಾಷ್ಟ್ರೀಯ ಚಂದ್ರನ ದಿನ"ಎಂಬ ವಿಷಯದ ಕುರಿತು ದಕ್ಷಿಣ–ಕನ್ನಡ ATL ವತಿಯಿಂದ ನಡೆದ ಕಾರ್ಯಗಾರದಲ್ಲಿ 4 ವಿದ್ಯಾರ್ಥಿಗಳು ಹಾಗು 2 ಶಿಕ್ಷಕಿಯರು ಭಾಗವಹಿಸಿದ್ದರು



**ಕರಾಟೆ ಸ್ಪರ್ಧೆಯಲ್ಲಿ ಭಾಗಿ 24.07.2023**

ತಾಲೂಕು ಮಟ್ಟದ ಕರಾಟೆ ಸ್ಪರ್ಧೆಯಲ್ಲಿ 17 ರ ವಯೋಮಾನದ ಬಾಲಕರ 40 ಕೆ.ಜಿ ವಿಭಾಗದಲ್ಲಿ ಧನುಷ್ 10ನೇ (ಚ್ಯವನ) ತೃತೀಯ ಸ್ಥಾನ ಹಾಗೂ 17 ರ ವಯೋಮಾನದ ಬಾಲಕಿಯರ 40 ಕೆಜಿ ವಿಭಾಗದಲ್ಲಿ ಉಮಾಭಾರತಿ 9ನೇ (ಓಬವ್ವ) ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.



**ಶಾಲಾ ಸಂಸತ್ತು ಚುನಾವಣೆ 1/07/2023**

2023–24 ನ ಸಾಲಿನ ಶಾಲಾ ಸಂಸತ್ತಿನ ಚುನಾವಣೆ ನಡೆಯಿತು. ಚುನಾವಣೆಯಲ್ಲಿ ಡಿಜಿಟಲ್ ಮತಯಂತ್ರವನ್ನು ಬಳಸಲಾಗಿತ್ತು. ಚುನಾವಣೆಯನ್ನು ಶ್ರೀಮತಿ ಮಲ್ಲಿಕ ಮಾತಾಜಿ ಹಾಗು ಶ್ರೀಮತಿ ಚೈತ್ರ ಮಾತಾಜಿ ಆಯೋಜನೆ ಮಾಡಿದರು.

## ಪದವಿಪೂರ್ವ



**ಔಷಧೀಯ ಸಸ್ಯಗಳ ಸಂರಕಣೆ 11.7.23**

ಪದವಿಪೂರ್ವ ಕಾಲೇಜಿನಲ್ಲಿ ವಿವೇಕ ಸಂಜೀವಿನಿ ಪರಿಕಲ್ಪನೆಯಲ್ಲಿ ಔಷಧೀಯ ಸಸ್ಯಗಳ ಸಂರಕ್ಷಣೆಗೆ ಗಿಡಗಳ ತಯಾರಿ ಕಾರ್ಯಕ್ರಮ ನಡೆಸಲಾಯಿತು. ಬಾಳಿಲ ಗ್ರಾಮ ಪಂಚಾಯತ್ ಹಾಗೂ ವಿವಿಧ ಕಡೆಗಳಲ್ಲಿ ಗಿಡಗಳನ್ನು ನೆಟ್ಟು ಸಂರಕ್ಷಣೆ ಮಾಡಲಾಯಿತು.




**ವಿದ್ಯಾರ್ಥಿ ಸಂಘ ಉದ್ಘಾಟನೆ 10.07.2023**

2023– 24ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘವನ್ನು ಮತ್ತು ವಿವಿಧ ಸಂಘಗಳನ್ನು ಮಾಜಿ ಶಾಸಕರು ಶ್ರೀ ಪದ್ಮನಾಭ ಕೊಟ್ಟಾರಿ ಉದ್ಘಾಟಿಸಿದರು. ವಿದ್ಯಾರ್ಥಿ ಸಂಘದ ನಿರ್ದೇಶಕಿ ಶ್ರೀಮತಿ ಶೋಭಾ ಆಯ್ಕೆಯಾದ ಎಲ್ಲಾ ಪ್ರತಿನಿಧಿಗಳಿಗೆ ಪ್ರಮಾಣವಚನ ಬೋಧಿಸಿದರು.



**ಕಂಪೆನಿ ಸೆಕ್ರೆಟರಿ (cs) ತರಬೇತಿ 29.07.2023**

ಭಾಮತಿ ವಾಣಿಜ್ಯ ಸಂಘದ ವತಿಯಿಂದ ಕಂಪೆನಿ ಸೆಕ್ರೆಟರಿ (cs)ತರಬೇತಿ ಕೋರ್ಸ್‌ನ ಬಗ್ಗೆ ವಿದ್ಯಾಲಯದ ಹಿರಿಯ ವಿದ್ಯಾರ್ಥಿ ಶ್ರೀ ಸರ್ವೇಶ್ ಶೆಟ್ಟಿ ನೀಡಿದರು. ಸಂಘದ ನಿರ್ದೇಶಕರಾದ ಶ್ರೀ ದಿನೇಶ್, ಉಪನ್ಯಾಸಕಿ ಶ್ರೀಮತಿ ಚೈತನ್ಯ ಉಪಸ್ಥಿತರಿದ್ದರು.

## ಪದವಿ

**ದೀಪ ಪ್ರದಾನ 12.07.2023**

12ನೇ ವರ್ಷದ ಪದವಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಆಜಾದ್ ಸಭಾಂಗಣದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಅಂತಿಮ ಪದವಿ ವಿದ್ಯಾರ್ಥಿಗಳು ಮುಂದಿನ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಬೆಳಗುವ ದೀಪ ಕೊಡುವ ಮೂಲಕ ತಮ್ಮ ಜವಾಬ್ದಾರಿಗಳನ್ನು ಹಸ್ತಾಂತರಿಸಿದರು. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾಕೇಂದ್ರದ ಸಂಸ್ಥಾಪಕರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ವಹಿಸಿದ್ದರು.





**ಮಂಥನ–ಏಕರೂಪ ನಾಗರಿಕ ಸಂಹಿತೆ 28.7.23**




ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆದ "ಏಕರೂಪ ನಾಗರಿಕ ಸಂಹಿತೆ" ಎಂಬ ಮಂಥನ ಕಾರ್ಯಕ್ರಮದಲ್ಲಿ ಕರ್ನಾಟಕದ ಉಚ್ಚ ನ್ಯಾಯಲಯದ ಖ್ಯಾತ ನ್ಯಾಯವಾದಿ ಶ್ರೀ ಅರುಣ್ ಶ್ಯಾಮ ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ವಿವರಿಸಿದರು. ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಉಪಸ್ಥಿತರಿದ್ದರು.

## ಪದವಿ ವಿದ್ಯಾಲಯದ ಪ್ರತಿಭಾ ದಿನೋತ್ಸವ – ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ವಿದ್ಯಾರ್ಥಿ ಸಂಘದ ಲಾಂಛನ ಬಿಡುಗಡೆ ಕಾರ್ಯಕ್ರಮ 12.07.2023













ಖ್ಯಾತ ಹಿನ್ನೆಲೆ ಧ್ವನಿ ಕಲಾವಿದರಾದ ಶ್ರೀ ಬಡೆಕ್ಕಿಲ ಪ್ರದೀಪ್, ಖ್ಯಾತ ಭಾಗವತರಾದ ಶ್ರೀಮತಿ ಅಮೃತಾ ಅಡಿಗ, ಶ್ರೀಮತಿ ಜಯಲಕ್ಷ್ಮೀ, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ರಾಜೇಶ್ ನರಿಂಗಾಣ ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರಿಂದ "ಶ್ರೀರಾಮ ದರ್ಶನ" ಯಕ್ಷಗಾನ ನಡೆಯಿತು. ಯಕ್ಷಗುರುಗಳಾದ ಮೋಹನ್ ಕುಮಾರ್ ಅಮ್ಮುಂಜೆಯವರನ್ನು ಡಾ. ಪ್ರಭಾಕರ ಭಟ್ ಅವರು ಸನ್ಮಾನಿಸಿದರು. 2022–23ನೇ ಸಾಲಿನ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು, ವಿವಿಧ ಕಾಲೇಜು ಮಟ್ಟದ, ವಿಶ್ವ ವಿದ್ಯಾಲಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರನ್ನು, ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು, ಕಳೆದ ಶೈಕ್ಷಣಿಕ ವರ್ಷದಲ್ಲಿ 4ನೇ ರ್‍ಯಾಂಕ್ ಗಳಿಸಿದ ವಾಣಿಜ್ಯ ವಿದ್ಯಾರ್ಥಿನಿ ಕು. ನಿರೀಕ್ಷಾ ಇವರನ್ನು ಗುರುತಿಸಿ ಗೌರವಿಸಲಾಯಿತು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭರತನಾಟ್ಯ, ವಾದ್ಯಸಂಘೀತ, ಸಮೂಹನೃತ್ಯ, ತುಳುನಾಟಕ, ವೈಯಕ್ತಿಕ ಗೀತೆ, ಗಾರ್ಭಾ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು.




## ಎರಡು ದಿನಗಳ ಕಂಪ್ಯೂಟರ್ ಶಿಕ್ಷಕರ ಕಾರ್ಯಾಗಾರ 29.7.23, 30.07.2023

ವಿವೇಕಾನಂದ ವಿದ್ಯಾವರ್ಧಕ ಸಂಘದ ಆಶ್ರಯದ ಎಲ್ಲಾ ಕನ್ನಡ ಮಾಧ್ಯಮ ಶಾಲೆಗಳ ಕಂಪ್ಯೂಟರ್ ಶಿಕ್ಷಕರ 2 ದಿನಗಳ ಕಾರ್ಯಾಗಾರ ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕ ಇದರ 'ಕಣಾದ' ಕಂಪ್ಯೂಟರ್ ಲ್ಯಾಬ್‌ನಲ್ಲಿ ನಡೆಯಿತು. ಕರ್ನಾಟಕ ಸರಕಾರದ ಮಾಹಿತಿ ಮತ್ತು ತಂತ್ರಜ್ಞಾನ ಸಲಹೆಗಾರ, ಮೊದಲ ಬಾರಿಗೆ ಕನ್ನಡದಲ್ಲಿ ವೆಬ್‌ಸೈಟ್ ರಚಿಸಿದ ಡಾ ಯು.ಬಿ.ಪವನಜ ದೀಪ ಬೆಳಗಿಸಿ ಉದ್ಘಾಟಿಸಿದರು. ನಂತರ ಮಾಹಿತಿ ತಂತ್ರಜ್ಞಾನದಲ್ಲಿ ಕನ್ನಡದ ಬಳಕೆ ಮತ್ತು ತಂತ್ರಾಂಶವನ್ನು ಕನ್ನಡದಲ್ಲಿ ಕೋಡಿಂಗ್‌ನ್ನು ಬಳಸುವುದು ಹೇಗೆ ಎಂಬುದರ ಬಗ್ಗೆ ತಿಳಿಸಿದರು.ಇನ್ನೋರ್ವ ಸಂಪನ್ಮೂಲ ವ್ಯಕ್ತಿ 20ಕ್ಕಿಂತ ಹೆಚ್ಚು ತಾಂತ್ರಿಕ ಪ್ರಕಟಣೆಗಳಿರುವ, 30 ಪೇಟೆಂಟ್ಗಳು ಇರುವ ಡಾ। ಆನಂದ್ ಸಾವಂತ್ ತರಬೇತಿ ನೀಡಿದರು. ಶ್ರೀ ರಘುರಾಜ್ ಉಬರಡ್ಕ, ಶ್ರೀ ಗೋಪಾಲ್ ಎಂ. ಶ್ರೀ ಕುಶಾಲಪ್ಪ ಅಮ್ಟೂರು ಉಪಸ್ಥಿತರಿದ್ದರು.



ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373
ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | | |
|---|---|---|
| ಚಿನ್ನಾಭರಣ ಸಾಲ | – | 10.5% |
| ಜಾಮೀನು ಸಾಲ | – | 16% |
| ಅಡವು ಸಾಲ | – | 13% |
| ವಾಹನ ಸಾಲ | – | 11.5% |
| ಗೃಹ ನಿರ್ಮಾಣ ಸಾಲ | – | 11% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | | |
|---|---|---|
| 91ದಿನಗಳವರೆಗೆ | – | 7% |
| 92ರಿಂದ 181 ದಿನಗಳು | – | 7.5% |
| 182 ರಿಂದ 364 ದಿನಗಳು | – | 8.5% |
| 1 ವರ್ಷ ಮತ್ತು ಮೇಲ್ಪಟ್ಟು | – | 9% |

ಸೌಲಭ್ಯ
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 10 Issue :3 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363